**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.120/2019**

**(ಚಾ.ಸಾ.8/ಪ್ರಾ.ಸಾ.5)**

ತಾಃ 10.04.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಡಾ.ಭಾಸ್ಕರ್ ರೆಡ್ಡಿ |
| ತಂದೆಯ ಹೆಸರು | ಓಬಲ್ ರೆಡ್ಡಿ |
| ವಯಸ್ಸು | 41 ವರ್ಷ |
| ಉದ್ಯೋಗ | ವೈದ್ಯಾಧಿಕಾರಿ, ಸರ್ಕಾರಿ ಆಸ್ಪತ್ರೆ ನಂದಗುಡಿ |
| ವಾಸ ಸ್ಥಳ | ನಂದಗುಡಿ |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2017 ನೇ ಇಸವಿ ಅಕ್ಟೋಬರ್ ತಿಂಗಳಿನಿಂದ ನಂದಗುಡಿ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ಚಾಸಾ.2 ಕಮಲಾಕ್ಷಿ ಎಂಬ ಗಾಯಾಳು ದಿಃ13.10.2018 ರಂದು ಮಧ್ಯಾಹ್ನ 3.30 ರ ಸಮಯದಲ್ಲಿ ಆದ ಹೊಡೆದಾಟದ ಹಿನ್ನಲೆಯಲ್ಲಿ ಅದೇ ದಿನ ಪ್ರಥಮ ಚಿಕಿತ್ಸೆ ಪಡದಿದ್ದು ನಮ್ಮ ಆಸ್ಪತ್ರೆಗೆ ದಿಃ16.10.2018 ಮಧ್ಯಾಹ್ನ 12.00 ಗಂಟೆಗೆ ಪರೀಕ್ಷೆಗಾಗಿ

ದಾಖಲಾಗಿದ್ದರು. ಅವರ ಬಲ ಮುಂಗೈನಲ್ಲಿ ಊತ ಹಾಗೂ ನೋವು ಇರುವುದು ಕಯಿ ಬಂದಿರುತ್ತದೆ. ಗಾಯಾಳುವಿಗೆ ನಾನು ಚಿಕಿತ್ಸೆ ನೀಡಿದ್ದು ಸದರಿ ಗಾಯಗಳು ಸಾಧಾರಣ ಸ್ವರೂಪದ ಗಾಯಗಳಾಗಿರುತ್ತವೆ. ಇದರ ಬಗ್ಗೆ ನಾನು ಗಾಯದ ಪ್ರಮಾಣ ಪತ್ರ ನೀಡಿದ್ದು ಸಾಕ್ಷಿದಾರರು ತಾನು ನೀಡಿದ ಗಾಯದ ಪ್ರಮಾಣ ಪತ್ರ ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.7 ಹಾಗೂ ನಿ.ಪಿ.7(ಎ) ಎಂದು ಗುರುತಿಸಲಾಯಿತು.

2. ಚಾಸಾ.1 ಸಂತೋಷ ಇವರು ಅದೇ ಹೊಡೆದಾಟದ ಹಿನ್ನಲೆಯಲ್ಲಿ ನಮ್ಮ ಆಸ್ಪತ್ರೆಗೆ ದಿಃ16.10.2018 ಬೆಳಿಗ್ಗೆ 10.00 ಗಂಟೆಗೆ ದಾಖಲಾಗಿದ್ದರು. ಅವರೂ ಸಹ ಮೊದಲೇ ಬೇರೆ ಆಸ್ಪತ್ರೆಗೆ ಹೆವಾಗಿ ಚಿಕಿತ್ಸೆ ಪಡೆದಿದ್ದರು ಅವರ ಹಣೆಯ ಭಾಗದಲ್ಲಿ 3x1/2 cm ಅಳತೆಯ ಹರಿತ ಗಾಯವಾಗಿದ್ದು ಅದಕ್ಕೆ ಹೊಲಿಗೆ ಹಾಕಿಸಿಕೊಂಡು ಬಂದಿದ್ದರು. ಚಾಸಾ.1 ರವರು ನೋವು ಇರುವುದಾಗಿ ತಿಳಿಸಿದ್ದು ಅವರಿಗೆ ಚಿಕಿತ್ಸೆ ನೀಡಿದ್ದೇನು. ಚಾಸಾ.1 ರವರು ಸಿಟಿ ಸ್ಕ್ಯಾನ್ ಹಾಜರುಪಡಿಸಿದ್ದು ಅದನ್ನು ಪರಿಶೀಲಿಸಿದಾಗ ಚಾಸಾ.1 ರವರಿಗೆ ಯಾವುದೇ ಹೆಮರೇಜ್ ಹಾಗೂ ಮೂಳೆ ಮುರಿತ ಆಗದೆ ಇರುವುದು ಕಂಡು ಬಂದಿರುತ್ತದೆ. ಚಾಸಾ.1 ರವರಿಗೆ ಆದ ಗಾಯ ಸಾಧಾರಣ ಸ್ವರೂಪದ ಗಾಯವಾಗಿದ್ದು ಇದರ ಬಗ್ಗೆ ನಾನು ಗಾಯದ ಪ್ರಮಾಣ ಪತ್ರ ನೀಡಿದ್ದು ಸಾಕ್ಷಿದಾರರು ತಾನು ನೀಡಿದ ಗಾಯದ ಪ್ರಮಾಣ ಪತ್ರ ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.8, ನಿ.ಪಿ.8(ಎ) ಎಂದು ಗುರುತಿಸಲಾಯಿತು.

3. ಚಾಸಾ.2 ವರಿಗೆ ಆದಂತಹ ಗಾಯ ಯಾವುದೇ ವ್ಯಕ್ತಿ ಮು,ಮಾ.1 ದೊಣ್ಣೆಯಿಂದ ಹಲ್ಲೆ ಮಾಡಿದಾಗ ಆಗುವ ಸಾಧ್ಯತೆ ಇದೆ. ಚಾಸಾ.1 ರವರಿಗೆ ಆದ ಗಾಯ ಯಾವುದೇ ವ್ಯಕ್ತಿ ಮು.ಮಾ.2 ಕಬ್ಬಿಣದ ರಾಡ್ ನಿಂದ ಹಲ್ಲೆ ಮಾಡಿದಾಗ ಆಗುವ ಸಾಧ್ಯತೆ ಇದೆ.

<u>ಪಾಟೀ ಸವಾಲುಃ ಆರೋಪಿಪರ ಶ್ರೀ. ಎಮ್.ಎಸ್. ವಕೀಲರಿಂದಃ</u>

4. ನಿ.ಪಿ.7 ಗಾಯದ ಪ್ರಮಾಣ ಪತ್ರದಲ್ಲಿ ಎರಡು ಕಡೆ ದಿನಾಂಕ ತಿದ್ದುಪಡಿ ಆಗಿರುತ್ತದೆ ಎಂದರೆ ಸರಿ. ಚಾಸಾ.1 ಮತ್ತು 2 ರವರು ತಮಗೆ ಯಾರಿಂದ ಗಾಯಗಳು ಆಗಿರುತ್ತದೆ ಎಂದು ನನ್ನ ಬಳಿ ಬಂದಾಗ ತಿಳಿಸಿಲ್ಲ ಎಂದರೆ ಸರಿ. ನಿ.ಪಿ.7 ಮತ್ತು 8 ರಲ್ಲಿ ಗಾಯದ ವಯಸ್ಸನ್ನು ಹಾಗೂ ಪರೀಕ್ಷೆ ಮಾಡಿದಂತಹ ದಿನದಂದು ಗಾಯದ ಸ್ಥಿತಿಗತಿಯನ್ನು ನಾನು ತಿಳಿಸಿಲ್ಲ ಎಂದರೆ ಸರಿ. ಚಾಸಾ.1 ಮತ್ತು 2 ರವರು ಎಲ್ಲಿ ಪ್ರಥಮ ಚಿಕಿತ್ಸೆ ಪಡೆದಿರುತ್ತಾರೆ ಎಂದು ನಿ.ಪಿ.7 ಮತ್ತು 8 ರಲ್ಲಿ ನಾನು ತಿಳಿಸಿಲ್ಲ ಎಂದರೆ ಸರಿ. ಪೊಲೀಸರು ಚಾಸಾ.1 ಮತ್ತು 2 ರವರನ್ನು ನಾನು ಪರೀಕ್ಷೆಗೆ ಒಳಪಡಿಸಿದ ಸಂಧರ್ಭದಲ್ಲಿ ಮು.ಮಾ.1 ಮತ್ತು 2 ವಸ್ತುಗಳನ್ನು ಹಾಜರುಪಡಿಸಿ ನನ್ನಿಂದ ಯಾವುದೇ ಅಭಿಪ್ರಾಯವನ್ನು ಪಡೆದಿಲ್ಲ.

5. ಯಾವುದೇ ಒಬ್ಬ ವ್ಯಕ್ತಿ ನೆಲಮ ಮೇಲೆ ಬೀಳುವಾಗ ತನ್ನ ಕೈಯನ್ನು ಅಡ್ಡ ಕೊಟ್ಟಾಗ ನಿ.ಪಿ.7 ರಲ್ಲಿ ಕಾಣಿಸಿದ ಗಾಯ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

ಚಾಸಾ.1 ರವರಿಗೆ ಯಾವ ರೀತಿ ಗಾಯಗಳು ಆಗಿರುತ್ತದೆ ಎಂಬ ಬಗ್ಗೆ ನಾನು ಅವರಿಂದ ಮಾಹಿತಿ ಪಡೆದು ನಿ.ಪಿ.8 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಯಾವುದೇ ಒಬ್ಬ ವ್ಯಕ್ತಿ ಒಂದು ಚೂಪಾದ ಕಲ್ಲಿನ ಮೇಲೆ ಬಿದ್ದಾಗ ನಿ.ಪಿ.8 ರಲ್ಲಿ ಕಾಣಿಸಿದ ಗಾಯ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಚಾಸಾ.1 ಮತ್ತು 2 ರವರು ಎಲ್ಲಿ ಪ್ರಥಮ ಚಿಕಿತ್ಸೆ ಪಡೆದಿರುತ್ತಾರೆ ಎಂಬ ವಿಚಾರವನ್ನು ನಾನು ನಿ.ಪಿ.7 ಮತ್ತು 8 ರಲ್ಲಿ ಕಾಣಿಸಿಲ್ಲ ಎಂದರೆ ಸರಿ. ಪೊಲೀಸರ ಕೋರಿಕೆಯ ಮೇರೆಗೆ ನಿ.ಪಿ.7 ಮತ್ತು 8 ಅನ್ನು ನೀಡಿರುತ್ತೇನೆ ಎಂದರೆ ಸಾಕ್ಷಿಯು ರೋಗಿಗಳನ್ನು ಪರೀಕ್ಷಿಸಿ ರಿಪೋರ್ಟ್ ಅವುಗಳನ್ನು ನೀಡಿರುವುದಾಗಿ ಉತ್ತರಿಸಿರುತ್ತಾರೆ. ನಿ.ಪಿ.7 ರಲ್ಲಿ ಚಾಸಾ.2 ರವರಿಗೆ ಸಂಬಂಧಿಸಿದಂತೆ ಯಾವುದೇ ರಿಪೋರ್ಟ್ ಇರದಿದ್ದ ಕಾರಣ ನಾನು ಅದರಲ್ಲಿ ನಮೂದಿಸಿಲ್ಲ. ಚಾಸಾ.1 ರವರಿಗೆ ಸಂಬಂಧಿಸಿದ ಸಿಟಿ ಸ್ಕ್ಯಾನ್ ಅನ್ನು ನಾನು ಪರಿಶೀಲಿಸಿದ್ದು ದಿನಾಂಕವನ್ನು ನಿ.ಪಿ.8 ರಲ್ಲಿ ಕಾಣಿಸಿಲ್ಲ.

6. ಯಾವುದೇ ಎಮ್.ಎಲ್.ಸಿ ಕೇಸ್ ಗಳು ಬಂದಾಗ ಅದನ್ನು ವೈದ್ಯರು ಪ್ರತ್ಯೇಕವಾದ ರಿಜಿಸ್ಟರ್ ನಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿ. ಎಲ್ಲಾ ಎಮ್.ಎಲ್.ಸಿ ಕೇಸ್ ಗಳಲ್ಲಿ ಹೊಡೆದಾಟದ ಹಿನ್ನಲೆಯನ್ನು ತಿಳಿದುಕೊಂಡು ಗಾಯದ ಪ್ರಮಾಣ ಪತ್ರಗಳಿಗೆ ಅದನ್ನು ನಮೂದಿಸಬೇಕು ಎಂದು ನಿಯಮ ಇರುತ್ತದೆ ಎಂದರೆ ಸರಿ. ನಿ.ಪಿ.7 ಮತ್ತು 8 ರಲ್ಲಿ ಹೊಡೆದಾಟದ ಹಿನ್ನಲೆಯ ವಿವರಗಳನ್ನು ಯಾವ ಕಾರಣಕ್ಕಾಗಿ ನಮೂದಿಸಿಲ್ಲ ಎಂದು ಕೇಳಿದ್ದಕ್ಕೆ ಸಾಕ್ಷಿದಾರರು ವೈದ್ಯರಿಗೆ ಅದು ಬೇಕಾಗಿಲ್ಲ ಎಂದು ನುಡಿದಿರುತ್ತಾರೆ. ನಾನು ಚಾಸಾ.1 ಮತ್ತು 2 ರವರನ್ನು ಪರೀಕ್ಷೆಗೆ

ಒಳಪಡಿಸದೆ ಪೊಲೀಸರ ಕೋರಿಕೆಯ ಮೇರೆಗೆ ನಿ.ಪಿ.7 ಮತ್ತು 8 ರ ಸರ್ಟಿಫಿಕೇಟ್ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.